# ವಿಡಿಐಟಿಯಲ್ಲಿ ವರ್ಣಮಯವಾಗಿ

# ಹೋಳಿ ಹುಣ್ಣಿಮೆ ಆಚರಣೆ



**ನುಡಿಜೇನು ವರದಿ**

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಬಣ್ಣಗಳ ಹಬ್ಬ ಹೋಳಿ ಹುಣ್ಣಿಮೆಯನ್ನು ಸಂಭ್ರಮದಿಂದ ಮಾರ್ಚ್ 25ರಂದು ಆಚರಿಸಲಾಯಿತು. ಮಹಾವಿದ್ಯಾಲಯದ ವಸತಿಗೃಹದ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಬಣ್ಣದ ಹಬ್ಬವನ್ನು ವರ್ಣಮಯವಾಗಿ ಆಚರಿಸಿದರು.

ಪೂಜೆ ಸಲ್ಲಿಸುವ ಮೂಲಕ ಆರಂಭವಾದ ಬಣ್ಣದ ಸಡಗರ ನಡೆಯಿತು. ಕನ್ನಡ, ಹಿಂದಿ, ಮರಾಠಿ, ಜಾನಪದ ಗೀತೆಗಳಿಗೆ ವಿದ್ಯಾರ್ಥಿ ಗಳು ಕುಣಿದು ಕುಪ್ಪಳಿಸಿದರು.

ಭಾರತೀಯ ಸಾಂಸ್ಕೃತಿಕ ಹಬ್ಬಗಳ ಸೊಬಗಿನ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ದೃಷ್ಟಿಯಿಂದ ಮಹಾವಿದ್ಯಾಲಯದಲ್ಲಿ ಹೋಳಿ ಹಬ್ಬದ ಆಚರಣೆಗೆ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ ಹೇಳಿದ್ದಾರೆ.

ಡಾ. ಪೂರ್ಣಿಮಾ ರಾಯ್ಕರ್, ಪ್ರೊ. ಗೌರಿ, ಪ್ರೊ. ಶ್ರೀಪಾದರಾಜ ಇನಾಮ್ದಾರ್, ಪ್ರೊ. ದೀಪಕ್ ಲೋಕರೆ, ಗದಿಗಪ್ಪ ಎಳ್ಳೂರ್ ರಂಗಿನ ಹಬ್ಬದ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.



# ವಿಡಿಐಟಿಯಲ್ಲಿ ವರ್ಣಮಯವಾಗಿ ಹೋಳಿ ಹುಣ್ಣಿಮೆ ಆಚರಣೆ

ಸಾಗರ ಸಾಮ್ರಾಟ ಸಮಾಚಾರ

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಬಣ್ಣಗಳ ಹಬ್ಬ ಹೋಳಿ ಹುಣ್ಣಿಮೆಯನ್ನು ಸಂಭ್ರಮದಿಂದ ಮಾರ್ಚ್ 25ರಂದು ಆಚರಿಸಲಾಯಿತು. ಮಹಾವಿದ್ಯಾಲಯದ ವಸತಿಗೃಹದ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಬಣ್ಣದ ಹಬ್ಬವನ್ನು ವರ್ಣಮಯವಾಗಿ ಆಚರಿಸಿದರು. ಮುಂಜಾನೆ 10 ಘಂಟೆಗೆ ಪೂಜೆ ಸಲ್ಲಿಸುವ ಮೂಲಕ ಆರಂಭವಾದ ಬಣ್ಣದ ಸಡಗರ ಮಧ್ಯಾಹ್ನ 1 ರ ವರೆಗೂ ನಡೆಯಿತು. ಕನ್ನಡ, ಹಿಂದಿ, ಮರಾಠಿ, ಜಾನಪದ ಗೀತೆಗಳಿಗೆ ವಿದ್ಯಾರ್ಥಿ ಗಳು ಕುಣಿದು ಕುಪ್ಪಳಿಸಿದರು.

ಭಾರತೀಯ ಸಾಂಸ್ಕೃತಿಕ ಹಬ್ಬಗಳ ಸೊಬಗಿನ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ದೃಷ್ಟಿಯಿಂದ ಮಹಾವಿದ್ಯಾಲಯದಲ್ಲಿ ಹೋಳಿ ಹಬ್ಬದ ಆಚರಣೆಗೆ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದ್ದಾರೆ. ಡಾ. ಪೂರ್ಣಿಮಾ ರಾಯ್ಕರ್, ಪ್ರೊ. ಗೌರಿ, ಪ್ರೊ. ಶ್ರೀಪಾದರಾಜ ಇನಾಮ್ದಾರ್, ಪ್ರೊ. ದೀಪಕ್ ಲೋಕರೆ, . ಗದಿಗಪ್ಪ ಎಳ್ಳೂರ್ ರಂಗಿನ ಹಬ್ಬದ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

# ವಿಡಿಐಟಿಯಲ್ಲಿ ವರ್ಣಮಯವಾಗಿ ಹೋಳಿ ಹುಣ್ಣಿಮೆ ಆಚರಣೆ



**ಶಿರಸಿ ಸಮಾಚಾರ ⏭ ಹಳಿಯಾಳ:** ಕೆಎಲ್‌ಎಸ್ ವಿಡಿಐಟಿಯಲ್ಲಿ ಬಣ್ಣಗಳ ಹಬ್ಬ ಹೋಳಿ ಹುಣ್ಣಿಮೆಯನ್ನು ಸಂಭ್ರಮದಿಂದ ಮಾರ್ಚ್ 25ರಂದು ಆಚರಿಸಲಾಯಿತು. ಮಹಾವಿದ್ಯಾಲಯದ ವಸತಿಗೃಹದ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಬಣ್ಣದ ಹಬ್ಬವನ್ನು ವರ್ಣಮಯವಾಗಿ ಆಚರಿಸಿದರು.

ಮುಂಜಾನೆ 10 ಘಂಟೆಗೆ ಪೂಜೆ ಸಲ್ಲಿಸುವ ಮೂಲಕ ಆರಂಭವಾದ ಬಣ್ಣದ ಸಡಗರ ಮಧ್ಯಾಹ್ನ 1ರವರೆಗೂ ನಡೆಯಿತು. ಕನ್ನಡ, ಹಿಂದಿ, ಮರಾಠಿ, ಜಾನಪದ ಗೀತೆಗಳಿಗೆ ವಿದ್ಯಾರ್ಥಿಗಳು ಕುಣಿದು ಕುಪ್ಪಳಿಸಿದರು.

ಭಾರತೀಯ ಸಾಂಸ್ಕೃತಿಕ ಹಬ್ಬಗಳ ಸೊಬಗಿನ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ದೃಷ್ಟಿಯಿಂದ ಮಹಾವಿದ್ಯಾಲಯದಲ್ಲಿ ಹೋಳಿ ಹಬ್ಬದ ಆಚರಣೆಗೆ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಹೇಳಿದ್ದಾರೆ. ಡಾ. ಪೂರ್ಣಿಮಾ ರಾಯ್ಕರ್, ಪ್ರೊ. ಗೌರಿ, ಪ್ರೊ.ಶ್ರೀಪಾದರಾಜ ಇನಾಮ್ದಾರ್, ಪ್ರೊ. ದೀಪಕ್ ಲೋಕರೆ, . ಗದಿಗಪ್ಪ ಎಳ್ಳೂರ್ ರಂಗಿನ ಹಬ್ಬದ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.